ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ದಿನಾಂಕಃ 01-08-2017.**

**ಪಾಟೀ ಸವಾಲುಃ ಶ್ರೀ ಜಿ.ಎಂ.ವೈ ಪ್ರತಿವಾದಿ ಪರ ವಕೀಲರಿಂದಃ**

ನನ್ನ ತಂದೆಗೆ ನಾವು ಒಟ್ಟು ಐದು ಜನ ಮಕ್ಕಳು. ನಾವು ಸುಮಾರು 25 ವರ್ಷಗಳ ಹಿಂದೆ ಬೇರೆ ಬೇರೆಯಾಗಿದ್ದೇವೆ. ನನಗೆ ನಮ್ಮ ಕುಟುಂಬದ ಒಟ್ಟು ಎಷ್ಟು ಪಿತ್ರಾರ್ಜಿತ ಅಸ್ತಿಗಳು ಇವೆ ಎಂದು ಗೊತ್ತಿಲ್ಲ. ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿಲ್ಲ. ನಮ್ಮ ಸ್ವಯಾರ್ಜಿತ ಆಸ್ತಿಗಳನ್ನು ನಾವು ದಿನಾಂಕಃ26.05.1993 ರಲ್ಲಿ ಪಾಲುಪಾರಿಕತ್ತು ಮೂಲಕ ವಿಭಾಗ ಮಾಡಿಕೊಂಡಿದ್ದೇವೆ. ಸದರಿ ಪಾಲುಪಾರಿಕತ್ತು ಮೂಲಕ ನನಗೆ ಒಟ್ಟು 1 ಎಕರೆ 32 ಗುಂಟೆ ನನ್ನ ಭಾಗಕ್ಕೆ ಬಂದಿದೆ. ಸದರಿ ಜಮೀನು ಕಿಕ್ಕೇರಿ ಹೋಬಳಿ, ಬಿದುರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.56 ಕ್ಕೆ ಸೇರಿರುತ್ತದೆ. ಸದರಿ ಆಸ್ತಿಯನ್ನು ನಾನು ಸ್ವತಃ ಮಾದಾಪುರ ಗ್ರಾಮದ ಮಾರಪ್ಪನ ರವರ ಮಕ್ಕಳಿಂದ ಕ್ರಯಕ್ಕೆ ದಿನಾಂಕಃ02.10.1977 ರಲ್ಲಿ ಪಡೆದಿರುತ್ತೇನೆ. ಸದರಿ ಕ್ರಯಪತ್ರದಲ್ಲಿ ಸುಮಾರು 5 ವರೆ ಎಕರೆಯನ್ನು ಕ್ರಯಕ್ಕೆ ಪಡೆದಿರುತ್ತೇನೆ.

ಸದರಿ ಪಾಲುಪಾರಿಕತ್ತು ಮೂಲಕ ಬಂದ ಆಸ್ತಿಗಳನ್ನು ನನ್ನ ಅಣ್ಣ-ತಮ್ಮಂದಿರು ಹಾಗೂ ನಾನು ನಮ್ಮ ಆಸ್ತಿಗಳನ್ನು ಯಾರೂ ಮಾರಾಟ ಮಾಡಿಲ್ಲ. ದಾವಾ ಸ್ವತ್ತನ್ನು ನಾನು ದಿನಾಂಕಃ22.10.1981 ರಲ್ಲಿ ಕ್ರಯಕ್ಕೆ ಪಡೆದಿರುತ್ತೇನೆ.ಸದರಿ ಸ್ವತ್ತಿನ ಖಾತೆ ನಾನು ಕ್ರಯಕ್ಕೆ ಪಡೆದ ದಿನದಿಂದ ಇವತ್ತಿನವರೆಗೂ ನನ್ನ ಹೆಸರಿನಲ್ಲಿ ಬರುತ್ತಿದೆ. ಸದರಿ ಸ್ವತ್ತಿಗೆ ನಾನೆ ಕಂದಾಯ ಪಾವತಿಸುತ್ತಿದ್ದೇನೆ. ಸದರಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಈ ಹಿಂದೆ ಪ್ರತಿವಾದಿ ಅಸಲು ದಾವಾ ಸಂಖ್ಯೆ 594/2012 ನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯು ನನ್ನ ವಿರುದ್ದ ಕೆ.ಆರ್.ಪೇಟೆ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದಾರೆ. ಪ್ರತಿವಾದಿ ಪಾಲುಪಾರಿಕತ್ತು ಮೂಲಕ ತನ್ನ ಭಾಗಕ್ಕೆ ಆಸ್ತಿಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿದ್ದಾರೆ. ಮೇಲ್ಕಂಡ ನಮ್ಮ ಕುಟುಂಬದ ಪಾಲುಪಾರಿಕತ್ತಿನಲ್ಲಿ ದಾವಾ ಸ್ವತ್ತು ಸೇರಿಲ್ಲ. ದಾವಾ ಸ್ವತ್ತನ್ನು ಹೊರುತುಪಡಿಸಿ ಬೇರೆ ಎಲ್ಲಾ ಕ್ರಯಕ್ಕೆ ಪಡೆದ ಸ್ವತುತ್ತಗಳನ್ನು ವಿಭಾಗ ಮಾಡಿಕೊಂಡಿದ್ದೇವೆ.

ಸಾಕ್ಷಿಗೆ ಒಂದು ಪಹಣಿಯನ್ನು ತೋರಿಸಲಾಗಿ ಸದರಿ ದಾಖಲೆಯು ತನ್ನ ಹೆಸನರಲ್ಲಿದೆ ಎಂದು ಒಪ್ಪಿಕೊಂಡ ಕಾರಣ ನಿಶಾನೆ ಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಸರ್ವೆ ನಂ.56/1ಎ ಪಹಣಿಯನ್ನು ತೋರಿಸಲಾಗಿ ಅದನ್ನು ಒಪ್ಪಿದ್ದರಿಂದ ನಿಶಾನೆ ಡಿ-2 ಎಂದು, ಹಾಗೂ ಮುಂದುವರೆದು ಸರಿದ ಸ್ವತ್ತಿ2ಗೆ ಸಂಬಂಧಿಸಿದಂತೆ ರೂಚ.4,56,000/- ಗಳನ್ನು ಸಾಲ ಪಡೆದಿರುವುದಾಗಿ ನುಡಿಯುತ್ತಾರೆ.

ಎಲ್.ವಿ. ಕೃಷ್ಣೇಗೌಡ ನನ್ನ ಅಣ್ಣ. ದಿನಾಂಕಃ02.10.1977 ನೇ ಇಸವಿಯಲ್ಲಿ ನನ್ನ ಅಣ್ಣ ಎಲ್.ವಿ.ಕೃಷ್ಣೇಗೌಡ ಅಂದರೆ ನನ್ನ ಅಣ್ಣ 5 ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿ. ಸದರಿ 5 ಎಕರೆ ಜಮೀನಿನಲ್ಲಿ ನನಗೆ ಮತ್ತು ನನ್ನ ಸಹೋದರರಿಗೆ ಭಾಗ ಬಂದಿದೆ ಎಂದರೆ ಸರಿ. ನನ್ನ ಅಣ್ಣ ಕ್ರಯಕ್ಕೆ ಪಡೆದ ನಂತರ ಹಾಗೂ ಪಾಲುಪಟ್ಟಿಯಾದ ನಂತರ ಸಹ ಸದರಿ ಸ್ವತ್ತು ನನ್ನ ಅಣ್ಣ ಎಲ್.ವಿ.ಕೃಷ್ಣೇಗೌಡ ರವರ ಹೆಸರಿನಲ್ಲಿ ಪಹಣಿ ಬರುತ್ತಿವೆ ಎಂದರೆ ಸರಿ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ನಾನು ಮತ್ತು ಎಲ್.ವಿಕೃಷ್ಣೇಗೌಡ ರವರು ದಿನಾಂಕಃ13.02.2008 ರಂದು ಒಂದು ಹಕ್ಕು ಖುಲಾಸೆ ಪತ್ರ ಬರೆದುಕೊಂಡಿದ್ದೇವೆ ಎಂದರೆ ಸರಿ. ಸಾಕ್ಷಿಗೆ ಸದರಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಡಿ-3 ಎಂದು ಗುರುತಿಸಲಾಯಿತು.

ನನ್ನ ಅಣ್ಣ ಎಲ್.ವಿ.ಕೃಷ್ಣೇಗೌಡ ರವರು ದಿನಾಂಕಃ02.02.1998 ರಂದು ಜಯಮ್ಮ ಎಂಬುವವರಿಗೆ ಸರ್ವೆ ನಂ.40/1 ರಲ್ಲಿ 3 ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಹಾಗೂ ನನ್ನ ಅಣ್ಣ ಎಲ್.ವಿ.ಗೋವಿಂದರಾಜು ರವರು ದಿನಾಂಕಃ27.11.2013 ರಂದು ನೀಲಮ್ಮ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ನಂಬರ್ ಗೊತ್ತಿಲ್ಲ. ಸದರಿ ಸ್ವತ್ತಿನ ವಿಸ್ತೀರ್ಣ ಗೊತ್ತಿಲ್ಲ.

ಪ್ರತಿವಾದಿಗೆ ಗಾಂಧಿ ಸರ್ಕಲ್ ಚನ್ನರಾಯಪಟ್ಟಣದಲ್ಲಿ ಎಸ್.ಎ.ಎಸ್ ನಂ.532 ರಲ್ಲಿ ಕಟ್ಟಡ ಮತ್ತು ನಿವೇಶನ ಇದೆ ಎಂದರೆ ಸಾಕ್ಷಿಯು ಕಟ್ಟಡ ನನ್ನ ಅತ್ತಿಗೆ ಹೆಸರಿನಲ್ಲಿದ್ದು, ಖಾಲಿ ಜಾಗ ನನ್ನ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ನನ್ನ ಅತ್ತಿಗೆ ದಿನಾಂಕ23.10.1983 ರಂದು ಕ್ರಯಕ್ಕೆ ಪಡೆದಿರುತ್ತಾರೆ. ನಾನು 76X20 ಅಡಿಯನ್ನು, ನನ್ನ ಅತ್ತಿಗೆ 76X20 ಅಡಿಯನ್ನು ಕ್ರಯಕ್ಕೆ ಪಡೆದಿರುತ್ತೇವೆ. ದಾವಾ ಸ್ವತ್ತಿನ ಈಗ ಖಾಲಿ ಜಾಗ ಇದೆ. ಸದರಿ ಸ್ವತ್ತಿನಲ್ಲಿದ್ದ ಶೆಡ್‌ನ್ನು ಸುಮಾರು 10-15 ವರ್ಷಗಳ ಹಿಂದೆ ತೆಗೆದಿರುತ್ತೇನೆ.

ದಾವಾ ಸ್ವತ್ತು ಪಾಲುಪಾರಿಕತ್ತು ಪ್ರಕಾರ ಪ್ರತಿವಾದಿ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ನನ್ನ ವಿರುದ್ದ ಪ್ರತಿವಾದಿ ಕೆ.ಆರ್. ನ್ಯಾಯಾಲಯದಲ್ಲಿ ತನ್ನ ಭಾಗಕ್ಕೆ ಬಂದ ಸ್ವತ್ತುಗಳಿಗೆ ನಾನು ತೊಂದರೆ ನೀಡುತ್ತಿದ್ದೇನೆ ಎಂದು ಶಾಶ್ವತ ನಿರ್ಭಂದಕಾಜ್ಞೆ ಕೋರಿ ಸಲ್ಲಿಸಿದ್ದಾರೆ ಎಂದರೆ ಸರಿ. ಪ್ರತಿವಾದಿ ತೊಂದರೆ ಕೊಡುವ ಸಲುವಾಗಿ ಪ್ರತಿವಾದಿಯ ಆಸ್ತಿಗೆ ನಾನು ಈ ದಾವಾ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ ಃ</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

***(ಎಸ್.ಚಿನ್ನಸ್ವಾಮಿ)***
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,